## ಹೋಳಿಗೆಯಂಥ ಹುಡುಗಿಯ ಪ್ರಾಕ್ಟಿಕಲ್ ಮಾತು

# ಅದಿತಿ ಜೊತೆ ಬಾತ್‌ಚಿತ್

■ ಪದ್ಮನಾಭ ಭಟ್



'ಐ ಆ್ಯಮ್ ವೆರಿ ವೆರಿ ಡ್ಯಾಮ್ ಪ್ರಾಕ್ಟಿಕಲ್ ಹುಡುಗಿ'.

ಕಣ್ಣೋಟದಷ್ಟೇ ಹರಿತ ಸ್ಪಷ್ಟತೆಯಲ್ಲಿ ಮಾತಿಗಿಳಿದರು ಅದಿತಿ ಪ್ರಭುದೇವ. ಸದ್ಯ ಕನ್ನಡ ಚಿತ್ರರಂಗದಲ್ಲಿರುವ 'ನಾಯಕಿಯರ ನಿರ್ವಾತ'ವನ್ನು ತುಂಬಲು ದಾಪುಗಾಲಿಡುತ್ತಿರುವವರಲ್ಲಿ ಅದಿತಿಯೂ ಒಬ್ಬರು. ಕೆಂಡಸಂಪಿಗೆಯ ರೂಪದ ಆಕರ್ಷಣೆ ಮತ್ತು ಪ್ರತಿಭೆಯ ಕಂಪು ಎರಡನ್ನೂ ಹೊಂದಿರುವ ಅದಿತಿ, 'ಧೈರ್ಯಂ' ಸಿನಿಮಾ ಮೂಲಕ ಚಂದನವನಕ್ಕೆ ಪರಿಚಿತಗೊಂಡವರು. ನಂತರ 'ನಾಗಕನ್ನಿಕೆ' ಎಂಬ ಧಾರಾವಾಹಿಯಲ್ಲಿ ನಟಿಸಿದರು. ಅವರ ವೃತ್ತಿಜೀವನದಲ್ಲಿ ಲಿಫ್ಟ್ ಆಗಿ ಪರಿಣಮಿಸಿದ್ದು ಸುನಿ ನಿರ್ದೇಶನದ 'ಬಜಾರ್'. ಈಗ, 'ತೋತಾಪುರಿ', 'ರಂಗನಾಯಕಿ', 'ಬ್ರಹ್ಮಚಾರಿ', 'ಗಾಳಿಪಟ 2' – ಹೀಗೆ ಕೈತುಂಬ ಅವಕಾಶಗಳ ನಕ್ಷತ್ರಗುಚ್ಛವಿದೆ. ಈ ಯಶದ ಪಲ್ಲಕ್ಕಿ ಏರುವುದಕ್ಕೂ ಮುನ್ನ ಅವರು ಸಾಕಷ್ಟು ಸೈಕಲ್ ಹೊಡೆದಿದ್ದಾರೆ. 'ನಾವು ಉತ್ತರ ಕರ್ನಾಟಕದವ್ರು, ಮೊಂಡುತನ ಜಾಸ್ತಿ' ಎಂದು ನಗುವ ಅವರು, ಒಳ್ಳೆಯ ನಟಿಯೆಂದು ಗುರ್ತಿಸಿಕೊಳ್ಳಬೇಕು ಎಂಬ ಮೊಂಡುಛಲದ ಬಲದಿಂದ ತಮ್ಮದೇ ದಾರಿಯಲ್ಲಿ ನಡೆಯುತ್ತಿದ್ದಾರೆ. ಅದಿತಿ ಪಾಕಪ್ರವೀಣೆಯೂ ಹೌದು. ಸಿಹಿ, ಅದರಲ್ಲಿಯೂ ಹೋಳಿಗೆ ಅವರ ಆಲ್ ಟೈಮ್ ಫೇವರಿಟ್. ಹೋಳಿಗೆಯ ಮೆದು ಮತ್ತು ಸಕ್ಕರೆ ಪಾಕದ ಹದ ಎರಡೂ ಅವರ ಮಾತುಗಳಲ್ಲಿ ಕಾಣಸಿಗುತ್ತದೆ.

**ಕಳೆದ ಮೂರು ವರ್ಷಗಳ ಬಣ್ಣದ ಜಗತ್ತಿನ ಪಯಣ ಹೇಗಿತ್ತು?**

ನಾನು ಚಿತ್ರರಂಗಕ್ಕೆ ಬರುವಾಗ ಸಹಜವಾಗಿಯೇ ಬಂದೆ. ಮೊದಲ ಸಿನಿಮಾ 'ಧೈರ್ಯಂ' ನಂತರವೇ ಸಿನಿಮಾದ ರಿಯಲ್ ಜಗತ್ತು ತೆರೆದುಕೊಂಡಿತು. 'ಹಿತ್ತಿಲ ಗಿಡ ಮದ್ದಲ್ಲ' ಅನ್ನೋ ಮಾತು ನಮ್ಮ ಚಿತ್ರರಂಗಕ್ಕೆ ಚೆನ್ನಾಗಿ ಅನ್ವಯಿಸುತ್ತದೆ. ನಮ್ಮಲ್ಲಿ ಕನ್ನಡದ ಹುಡುಗಿಯರಿಗೆ ಅವಕಾಶಗಳು ಕಡಿಮೆ.

ನಾನು ಮಧ್ಯಮವರ್ಗದ ಕುಟುಂಬದಿಂದ ಬಂದವಳು. ಹಾಗಾಗಿ ನನ್ನ ಮಿತಿಗಳು, ಆಯ್ಕೆಗಳ ಬಗ್ಗೆ ಸ್ಪಷ್ಟವಾದ ಅಂದಾಜಿತ್ತು. ಯಾವುದು ಬೇಕು ಯಾವುದು ಬೇಡ ಎಂಬುದರಲ್ಲಿ ಗೊಂದಲಗಳಿರಲಿಲ್ಲ. ಈ ಕ್ಷೇತ್ರದಲ್ಲಿ ನಮ್ಮ ಪ್ರಯಾಣ ಯಾವಾಗ ಬೇಕಾದರೂ ಮುಗಿದುಬಿಡಬಹುದು. ಹತ್ತು ವರ್ಷ ಇಲ್ಲಿರಬಹುದು; ಎರಡೇ ವರ್ಷಕ್ಕೆ ಹೊರಟುಹೋಗಬಹುದು. ಇರುವಷ್ಟು ದಿನ ಒಳ್ಳೆಯ ನಿರ್ದೇಶಕರ ಜೊತೆಗೆ ಕೆಲಸ ಮಾಡಬೇಕು ಎಂಬುದು ನನ್ನ ಆಸೆ. ಪಾತ್ರದ ಕಾರಣದಿಂದಲೇ

> ನನಗೆ ಪ್ರಾಣಿಗಳು ಅಂದರೆ ತುಂಬ ಇಷ್ಟ. ತುಂಬ ಪ್ರಾಣಿಗಳನ್ನು ಸಾಕಿದೀನಿ. ಕಥೆ, ಕಾದಂಬರಿಗಳನ್ನು ಓದುವುದು ಇಷ್ಟ. ಎಸ್.ಎಲ್. ಭೈರಪ್ಪ, ಪೂರ್ಣಚಂದ್ರ ತೇಜಸ್ವಿ ನನ್ನ ಇಷ್ಟದ ಬರಹಗಾರರು. ರವಿ ಬೆಳಗೆರೆ ಅವರ ಕೆಲವು ಕಾದಂಬರಿಗಳು ಇಷ್ಟ.